ಕಟ್ಟೆಯ ಮೇಲೆ ಹಸಿಮೆಣಸಿನ ಚೊಟ್ಟು, ಮೂಲೆ ಮೂಲೆಯಲ್ಲಿ ಒಂಚೂರು ಜೇಡರ ಬಲೆ... ಹೀಗಿರುವ ಮನೆಯೇ ಆಪ್ತ. ಶಿಸ್ತಾಗಿ ಜೋಡಿಸಿಕೊಂಡು ಒಂದು ಧೂಳ ಕಣವೂ ಇಲ್ಲದಂತೆ ಒರೆಸಿದ ಫಳಫಳ ಹೊಳೆವ ಗಾಜುಗಳು, ವಿದ್ಯುತ್ ದೀಪಗುಚ್ಛಗಳ ವೈಭವದ ಬಿಳಿಬಿಳಿ ಏಕ ಸುಂದರ ಮನೆಗಳು ನನಗೆ ಭಯ ಹುಟ್ಟಿಸುತ್ತವೆ. ಅಲ್ಲಿನ ಟಾಯ್ಲೆಟ್, ಬಾತ್‌ರೂಮುಗಳು ಅಷ್ಟೆ. ನೀರು ಚೆಲ್ಲಿದರೆ ಹಾಳಾಗುವಂತೆ ಘನಘೋರ ಗಂಭೀರವಾಗಿ ಕಂಡು ಹೋದ ಕೆಲಸವೇ ಮರೆತು ಆರೋಗ್ಯ ಕೆಟ್ಟು ಉಸಿರು ಕಟ್ಟಿಬಿಡುತ್ತವೆ. ಇಂತಹ ಮನೆಗಳು ಮಾರಾಟದ ಜಾಗವಾದ ಶೋರೂಂ ಅನಿಸಿ ಎದೆ ಭಣಗುಟ್ಟ ತೊಡಗುತ್ತದೆ. 15–20ನೇ ಮಹಡಿಯ ಫ್ಲಾಟಿನ ಮನೆಗಳಂತೂ 'ಔಷಧಕ್ಕಾದರೂ ಒಂಚೂರು ಮಣ್ಣು ಬೇಕಿತ್ತಪ್ಪ' ಎಂದು ನಿಟ್ಟುಸಿರು ಹೊರಡಿಸುತ್ತವೆ. ಮನೆ ಎಂದರೆ ಒಂದು ಕಗ್ಗತ್ತಲ ಮೂಲೆ ಇರಬೇಕು, ಅತ್ತು–ನಕ್ಕು ಹಗುರಾಗಲು, ಪ್ರೀತಿಯಿಂದ ಎದೆ ಭಾರವಾಗಲು!

ಹುಟ್ಟಿ ಬೆಳೆದ ಬಾಲ್ಯದ ನಮ್ಮ ಮನೆಯ ಸುತ್ತ ಗದ್ದೆ, ತೋಟ, ತೋಡು, ಕಾಡುಗಳು. ಹಕ್ಕಿಗಳ ಮಧ್ಯೆ, ಪ್ರಾಣಿಗಳ ಮಧ್ಯೆ ಆಪ್ತವಾಗಿ ಸುಖವಾಗಿ ನಿದ್ದೆ ಮಾಡುತ್ತಿದ್ದೇವೆ ಎಂಬಂತಹ ರಾತ್ರಿಗಳು ಅಲ್ಲಿಯವು. ಮಳೆಗಾಲದ ಇರುಳಿನ ಗುಮ್ಮನ ಕೂಗು ಫ್ಯಾಂಟಸಿ ಲೋಕದ ಕಲ್ಪನೆ ಹುಟ್ಟಿಸುತ್ತಿತ್ತು. ನಾವು ಮಕ್ಕಳು ಎಲ್ಲ ರಾತ್ರಿಗಳಲ್ಲೂ ಗುಮ್ಮಗಳು ಸಂಭಾಷಣೆಯಲ್ಲಿ ತೊಡಗಲೆಂದು ಹಾರೈಸುತ್ತಿದ್ದೆವು. ಹಾಗೆ ಭಯಗೊಳ್ಳುವುದು ಖುಷಿ ಕೊಡುತ್ತಿತ್ತು. ಅಲ್ಲಿನ ಕಾವ್ಯಸದೃಶ ನಿಸರ್ಗ, ಹಾಡು, ಕಥೆ, ಚಿತ್ರಗಳಾಗಿ ನಮ್ಮಂತಹ ನರಮನುಷ್ಯರ ಸುಪ್ತ ಮನದೊಳಗೆ ಸೇರಿಬಿಟ್ಟಿರಬೇಕು. ಅಂತಹ ನಮ್ಮ ಮನೆ ಅಜ್ಜನ ಕಾಲದ ಹಳೆ ಭಾಗ ಮತ್ತು ಅಪ್ಪ ಕಟ್ಟಿದ ಹೊಸ ಭಾಗ ಸೇರಿ ಕಸಿಗೊಂಡಿತ್ತು. ಹಳೆ ಭಾಗದಲ್ಲಿ 'ಆಚೆಒಳ' ಎಂದು ಕರೆಯುತ್ತಿದ್ದ ಸಣ್ಣ ಕೋಣೆ, ಪಡಸಾಲೆ ಎಂಬ ತುಸು ದೊಡ್ಡ ಕೋಣೆ ಮತ್ತು ಅವುಗಳ ಮೇಲ್ಭಾಗದ ಉಪ್ಪರಿಗೆಯ ಪುಟಾಣಿ ಭಾಗವಾದ ಹಳುಪ್ಪರಿಗೆ ಇದ್ದವು. ಈ ಉಪ್ಪರಿಗೆಯಲ್ಲಿ ನಿಂತು ಕೆಳಗೆ ನೋಡಿದರೆ ನೆಲದಲ್ಲಿ ಒಂದು ಬೆಳಕಿಂಡಿ ಆಚೆ ಹೊಲದ ಮಬ್ಬು ಕತ್ತಲನ್ನು ತೋರಿಸುತ್ತಿತ್ತು. ಮನೆಯ ಹೊಸ ಭಾಗದಲ್ಲಿ ಚಾವಡಿ, ಜಗಲಿ, ಹೊಸುಪ್ಪರಿಗೆ, ಅಡುಗೆ ಮನೆ, ಉಪ್ಪರಿಗೆ ಮೆಟ್ಟಿಲು, ಕೊಟ್ಟಿಗೆ ಎಂದು ಕರಿಯುತ್ತಿದ್ದ ಸಿಟೌಟ್ ಇವಿಷ್ಟು ಸೇರಿತ್ತು.

ಚಾವಡಿ ಜಗಲಿಗಳೆಂಬ ಬಯಲಿನಂತೆ ಕಾಣುತ್ತಿದ್ದ ಜಾಗಗಳಿಗಿಂತ ನನಗೆ ಇಷ್ಟವಾಗುತ್ತಿದ್ದದ್ದು ಆಚೆಒಳ, ಹಳುಪ್ಪರಿಗೆ ಮತ್ತು ಅದರಲ್ಲಿದ್ದ ಅಟ್ಟ. ಅಟ್ಟದ ಒಳಗೆ ಬಗ್ಗಿಕೊಂಡು ಹೋಗಿ ಬೆಚ್ಚಗೆ ಕುಳಿತುಕೊಳ್ಳುವುದು ಆಗಾಗಿನ ಆಟವಾಗಿತ್ತು. ಬಾಳೆಹಣ್ಣು, ಉಂಡೆ ಕದ್ದು ತಿನ್ನುತ್ತಿದ್ದುದೆಲ್ಲ ಈ ಹಳುಪ್ಪರಿಗೆಯಲ್ಲೇ. ನಮ್ಮ 'ದೊಡ್ಡಬೆಕ್ಕು' ಎಷ್ಟೋ ಸಲ ಮರಿಯಿಟ್ಟು ಹಳುಪ್ಪರಿಗೆಯಲ್ಲಿ ನಾವು ಕೊಟ್ಟ ಬುಟ್ಟಿಯಲ್ಲಿ ಸುಖವಾಗಿ ಮಲಗುತ್ತಿತ್ತು. ಹೊಸುಪ್ಪರಿಗೆ ಇಷ್ಟವೆನಿಸಲು ಪ್ರಾರಂಭವಾದದ್ದು ಹದಿಹರೆಯದಲ್ಲಿ. ಆಗ 'ಮುಟ್ಟು' ಅನಿಸಿಕೊಂಡ ಮೂರು ದಿನದ ಆ ಯಾತನೆ ಹೊಸುಪ್ಪರಿಗೆಯ ಸಾಂಗತ್ಯದಲ್ಲಿ ತುಸು ಹಗುರಾಗುತ್ತಿತ್ತು. ದೊಡ್ಡ ಕಿಟಕಿ ದಂಡೆಗೆ ಮುಖವಿಟ್ಟು ಕುಳಿತರೆ ಹಿಂದಿನ ಮನೆಯವರ ಕೋಳಿಗಳು, ಹುಣಸೇ ಮರ, ಮಾವಿನ ಮರ ಎಲ್ಲ ಸಂಭಾಷಣೆಗೆ ಬರುತ್ತಿದ್ದವು. ಇಲ್ಲಿನ ಅಟ್ಟದಲ್ಲಿ ಎಷ್ಟೋ ಸಲ ಹಾವಿನಪೊರೆ ಕಾಣಸಿಗುತ್ತಿತ್ತು. ಅದಕ್ಕೆ ಭಯಪಟ್ಟಾಗ 'ಹಯ್ಸಾರ್ (ಕೇರೆ ಹಾವಿಂದ್. ಹೆದ್ರಿಕೆ ಇಲ್ಲೆ)' ಎಂದು ಅಮ್ಮ–ಅಜ್ಜಿ ಸಮಾಧಾನಿಸುತ್ತಿದ್ದರು. ಇಲಿ ಹಿಡಿಯಲೆಂದು ಮನೆಯೊಳಗೆ ಆಗಾಗ ಬರುತ್ತಿದ್ದ ಕೇರೆ ಹಾವು ಪೊರೆ ಬಿಟ್ಟು ಹೋಗುತ್ತಿತ್ತು. ಬರಿ ಇಲಿಯೆಂದಲ್ಲ, ಒಮ್ಮೊಮ್ಮೆ ಗೋಂಕರ ಕಪ್ಪೆಗಳನ್ನು ಓಡಿಸಿಕೊಂಡು ಬರುತ್ತಿತ್ತು. ಕಪ್ಪೆ ರಕ್ಷಣೆಗೆಂದು ಮನೆಯೊಳಗೆ ಓಡಿಬಂದರೆ ಈ ಕೇರೆಯು ಸಲೀಸಾಗಿ ಬಾಗಿಲೊಳಗೆ ನುಗ್ಗುತ್ತಿತ್ತು. ಆಗೆಲ್ಲ ಅಜ್ಜಿ ದೊಣ್ಣೆ ಹಿಡಿದು ಓಡಿಸುತ್ತಿದ್ದರು. ಹೀಗೆ ಉಪ್ಪರಿಗೆ ಎಂದೊಡನೆ ಆ ಠೊಣೆಯ ಕೇರೆ ಹಾವು ಬಿಡದೆ ನೆನಪಿಗೆ ಬರುತ್ತದೆ.

ಅಡುಗೆಮನೆಯಲ್ಲಿ ಸೌದೆ ಒಲೆಗಳಿದ್ದವು. ಅನ್ನ, ಸಾರು, ಕಾಫಿ, ಟೀ, ಏನು ಮಾಡಬೇಕಾದರೂ ಒಲೆ ಹೊತ್ತಿಸಲೇಬೇಕಿತ್ತು. ಅತ್ರ ಒಲೆ, ಗೋಬರ್‌ಗ್ಯಾಸ್ ಎಲ್ಲ ನಿಧಾನವಾಗಿ ಬಂದವು. ಅಡುಗೆ ಮನೆಯಲ್ಲೂ ಇಕ್ಕಲ್ ಹಲಗೆ ಎಂದು ಕರೆಯುವ ಬಿಸ್ಕಲ್ ಹಲಗೆ ಎಂದು ಕರೆಯುವ ಅಟ್ಟದಂತಹ ಭಾಗವಿತ್ತು. ಹಾಲು, ಮೊಸರು ಇಡಲು ಗೋಡೆಗೆ ನೇತುಹಾಕಿದ ಚಿತ್ರಗಳಿದ್ದವು. ತೆಂಗಿನಎಣ್ಣೆ, ತುಪ್ಪ ಇಡಲು ಗೋಡೆಯಲ್ಲಿ ಎತ್ತರಕ್ಕೆ ಗೂಡುಗಳಿದ್ದವು. ಮೂರು ನಾಲ್ಕು ಬೆಕ್ಕುಗಳು ಯಾವಾಗಲೂ ಅಡುಗೆ ಮನೆ ಒಲೆ ಮುಂದು ಬಿದ್ದುಕೊಂಡಿರುತ್ತಿದ್ದವು. ಆಶ್ಚರ್ಯವೆಂದರೆ ಚಳಿಗಾಲದ ರಾತ್ರಿಗಳಲ್ಲಿ ನಾನು, ಅಕ್ಕ ಅಡುಗೆಮನೆಯಲ್ಲಿ ಮಲಗುತ್ತಿದ್ದೆವು. ಒಲೆಯ ಶಾಖಕ್ಕೆ ಪಟ್ಟಾಗಿ ನಿದ್ದೆ ಬರುತ್ತಿತ್ತು. ಇಂತಹ ನಮ್ಮ ಮನೆಯ ಬಹುತೇಕ ಚಟುವಟಿಕೆಗಳು ಕೃಷಿಯನ್ನು ಅವಲಂಬಿಸಿದ್ದವು. ವ್ಯವಸಾಯ ಅಂದು ಜೀವನವಿಧಾನವೇ ಆಗಿತ್ತು.

ಕೆಲಸದ ಕಾರಣ ಘಟ್ಟದ ಊರೊಂದರಲ್ಲಿ ನೆಲೆ ನಿಂತಾದ ಬಿರುಬೇಸಗೆ ಜಡಿ ಮಳೆಯ ಕರಾವಳಿ ಭಾಗದ ನನಗೆ ಹೊಸ ಊರಿನ ಚಳಿಯೇ ಒಂದು ಜೀವಂತ ಪಾತ್ರವೆನಿಸುತ್ತಿತ್ತು. ಹಾಗೆ ಆ ಊರಿನಲ್ಲೊಂದು ದೊಡ್ಡದೊಂಡು ಬಾಡಿಗೆ ಮನೆಯಲ್ಲಿ ಮೂರು ವರ್ಷ ಇದ್ದೆವು. ಆ ಮನೆಯ ವಿಚಿತ್ರ ಆಕಾರವೇ ನನಗೆ ಹಿಡಿಸಿತ್ತು. ಸೈಟಿನ ಓರೆ ಕೋರೆಗಳಿಗೆ ಅನುಗುಣವಾಗಿ ಆ ಮನೆಯ ರೂಮುಗಳನ್ನು ಕಟ್ಟಿದ್ದರು. ಅಡುಗೆಮನೆಯಂತೂ ವಿಚಿತ್ರವಾಗಿ ಹತ್ತೆಂಟು ಮೂಲೆಗಳನ್ನು ಹೊಂದಿ ವಕ್ರವಕ್ರವಾಗಿ ಇತ್ತು. ಆ ಮನೆಯಲ್ಲಿದ್ದ ತೀರ ಸಣ್ಣ ಕೋಣೆಯೊಂದರಲ್ಲಿ ಅನೇಕ ಕವಿತೆಗಳನ್ನು ಬರೆದಿದ್ದೆ. ಶಾಲೆ ಕೆಲಸ ಮುಗಿಸಿ ದಣಿದು ಬಂದು ಚಳಿಗೆ ಕಾಫಿ ಕುಡಿಯುತ್ತ ಆ ಮೂಲೆರೂಮಿನ ಟೇಬಲ್ ಮುಂದೆ ಕುಳಿತು ಬರಿಯುತ್ತಿದ್ದರೆ ಪದಗಳು ಸರಾಗವಾಗಿ ಬರುತ್ತಿದ್ದವು. ಮಳೆಗಾಲದ ದಿನಗಳಲ್ಲಿ ಅಲ್ಲಿನ ಕಿಟಕಿಯಲ್ಲಿ ನಿಂತು ರಸ್ತೆಯನ್ನು, ಜನರನ್ನು ನೋಡುತ್ತ ಹತ್ತೂರಿಗೆ ಪಯಣಿಸಿ ಬಂದತ್ತಾಗುತ್ತಿತ್ತು. ಅಲ್ಲಿನ ಬಚ್ಚಲು ಮನೆಯದೇ ಒಂದು ಕಥೆ. ಕೊರೆಯುವ ಚಳಿಗೆ ಅನಿವಾರ್ಯವೆಂದು ಬಿಸಿ ನೀರಿಗೆ ಹಂಡೆ ಇಟ್ಟಿದ್ದರು. ತಿಂಗಳಿಗೊಮ್ಮೆ ಎತ್ತಿನ ಗಾಡಿಯಲ್ಲಿ ಬರುವ ಕಾಯಿಮಟ್ಟೆ ಕೊಂಡು ಅಟ್ಟದಂತ ಜಾಗದಲ್ಲಿ ಸಂಗ್ರಹಿಸುತ್ತಿದ್ದೆವು. ರಾತ್ರಿ ಮಲಗುವ ಮುಂಚೆ ನಮ್ಮತ್ತೆ ಒಲೆಗೆ ಕಾಯಿಮಟ್ಟೆ ತುಂಬಿಸಿ ಬೆಂಕಿ ಹಚ್ಚುತ್ತಿದ್ದರು. ಆದರೆ ಹೊಗೆಯ ನಳಿಕೆ ಸರಿಯಿಲ್ಲದಿದ್ದುದರಿಂದ ಹೊರ ಹೋಗದೆ ಕಟ್ಟಿಕೊಂಡು ಮನೆಯೊಳಗೂ ತುಂಬುತ್ತಿತ್ತು. ವಿಶಾಲವಾದ ಮನೆಯಾದ್ದರಿಂದ ಹೊಗೆಯ ಕಾಟ ಅಷ್ಟಾಗಿ ಗೊತ್ತಾಗುತ್ತಿರಲಿಲ್ಲ. ಆದರೆ ಕೊನೆಗೆ 'ಗೋಡೆಗಳು ಕಪ್ಪಾಗಿವೆ' ಎಂದು ಮನೆ ಓನರ್ ಆಕ್ಷೇಪಿಸುತ್ತಿದ್ದರು. ಹಾಗಾಗಿ ಸ್ವಾಭಿಮಾನಕ್ಕೆ ಪೆಟ್ಟು ಬಿದ್ದಂತೆನಿಸಿ 'ನಿಮ್ಮ ಮನೆ ಬೇಡ' ಎಂದು ಬಿಟ್ಟು ಬಂದೆವು. ಆದರೆ ಸುಮಾರು 6 ತಿಂಗಳ ತನಕ ಮರಳಿ ಆ ಮನೆಗೆ ಹಿಂದಿರುಗಬೇಕು ಅನ್ನಿಸಿ ಕಾಡಿಸಿ ನರಳಿದ್ದು ನಿಜ.

ಅದೇ ಊರಲ್ಲಿ ಮತ್ತೊಂದು ತೀರ ಸಣ್ಣ ಮನೆ. ಇದು ಅಷ್ಟೇ ಉದ್ದಕ್ಕೆ ಓಣಿಯಂತಿದ್ದ ವಿಚಿತ್ರ ಆಕಾರದ್ದು. ಓನರ್ ಮನೆಯ ಮೇಲ್ಭಾಗದ ಅಂಚಿನ ಪುಟ್ಟ ಜಾಗದಲ್ಲಿ ಇದನ್ನು ಕಟ್ಟಲಾಗಿತ್ತು. ಮನೆ ಬಾಗಿಲ ಮುಂದೇ ಕೈಗೆಟಕುವ ಹಲಸಿನ ಕೊಂಬೆ, ಕಾಯಿಗಳು! ಆ ಮರದ ಘಮವೇ ಇಡೀ ಮನೆಯನ್ನೆಲ್ಲಾ ಆವರಿಸಿಕೊಂಡಿತ್ತು. ಬಚ್ಚಲು ಮನೆಯ ಕಿಟಕಿಯಲ್ಲಂತೂ ಮರ ಒಳಗೇ ನುಗ್ಗಿತ್ತು. ಇದೇ ಕಾರಣಕ್ಕೆ ಆ ಮನೆ ಜೀವಂತವಾಗಿ ಕಂಡು ಒಂದೇ ಏಟಿಗೆ ಇಷ್ಟವಾಗಿತ್ತು. ಅಲ್ಲಿದ್ದಷ್ಟು ದಿನ ತೂಗು ಉದ್ಯಾನದಲ್ಲಿದ್ದೇವೆಂಬ ಭಾವ. ಫಲಗಾಳಿಗೆ ಸುಯ್ಯುವ ಆ ದೈತ್ಯ ಹಲಸಿನ ಮರದ ಕುರಿತು ಒಂದಷ್ಟು ಕವಿತೆಗಳು ನನ್ನೊಳಗೆ ಹುಟ್ಟಿದ್ದವು.

ಕೆ.ಎಸ್. ನರಸಿಂಹಸ್ವಾಮಿ ಅವರ 'ಮನೆಯಿಂದ ಮನೆಗೆ' ಕವನದ ವಸ್ತುವಿನಂತೆ ಮನೆ ಬದಲಾಯಿಸುವ ಅನಿವಾರ್ಯತೆಗೆ ಒಳಗಾಗಿ ವಿವಿಧ ಊರುಗಳಲ್ಲಿ ಇದುವರೆಗೆ 14 ಬಾಡಿಗೆ ಮನೆಗಳಲ್ಲಿ ನಾವು ವಾಸ ಮಾಡಿದ್ದೇವೆ. ಹಾಗೆ ಆರಂಭದ ದಿನಗಳಲ್ಲಿ ಸಣ್ಣ ಸಂಬಳದಲ್ಲಿದ್ದಾಗ ನೀರಿನ ಅನುಕೂಲವೂ ಇಲ್ಲದ ಒಂದು ಮನೆಯಲ್ಲಿದ್ದೆವು. ಮೈಸೂರು ಸೀಮೆಯ ಆ ಮನೆ ಮುಂದೆ ಆ ಏರಿಯಾದ ವ್ಯವಸ್ಥೆಯಂತೆ ಆರೇಳು ಅಡಿ ಆಳದ ಹೊಂಡದ ನಲ್ಲಿಯಲ್ಲಿ ನೀರು ಹಿಡಿಯಬೇಕಿತ್ತು. ಅಷ್ಟು ಆಳದಿಂದ ನೀರು ಎತ್ತಿ ತರುವುದೇ ಒಂದು ಸಾಹಸ. ಅದೂ ಅಲ್ಲದೇ ನಾಲ್ಕೈದು ಮನೆಗಳವರ ಕ್ಯೂ. ಆದರೆ ಚಿಕ್ಕ ಮಗು, ಬಾಣಂತಿ ಎಂಬ ಕಾರಣಕ್ಕೆ ನಮ್ಮ ಮನೆಗೆ ನೀರಿನ ವಿಷಯದಲ್ಲಿ ಅಕ್ಕಪಕ್ಕದವರು ಮಾಡುತ್ತಿದ್ದ ಸಹಾಯ ಮರೆಯಲಾಗದ್ದು. ಅಮ್ಮನಂತಹ ಹೆಂಗಸೊಬ್ಬರು ದಿನವೂ ಹತ್ತೆಂಟು ಕೊಡ ನೀರು ಹೊತ್ತು ತಂದು ಕೊಡುತ್ತಿದ್ದರು. ಸಂಕೋಚವೆನಿಸಿ ಬೇಡವೆಂದರೂ ಆ ತಾಯಿ ಕೇಳುತ್ತಿರಲಿಲ್ಲ. ವಿಶೇಷವೆಂದರೆ ಆ ಮನೆಯ ಅಡುಗೆಮನೆ ಹತ್ತಿರ ಸುರಂಗ ಮಾದರಿಯ ಸಣ್ಣ ಜಾಗವೊಂದಿತ್ತು. ಅಲ್ಲಿ ಕುಳಿತರೆ ಎಂಥದ್ದೋ ನಿರಾಳ. ಒಂದು ವರ್ಷದ ಕಂದನೊಂದಿಗೆ ಅಲ್ಲಿ